Tour of the Chief Minister to Delhi.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ 24 ಗಂಟೆಯಲ್ಲಿ ತರಾತುರಿಯಿಂದ ಹೋಗಿ ಬಂದಿದ್ದಾರೆ. ಅಲ್ಲಿ ಭೂಸುಧಾರಣೆಯ ವಿಚಾರ ಬಂತೇ ಮಂತ್ರಿಮಂಡಲದ ವಿಸ್ತರಣೆಯ ವಿಚಾರ ಬಂತೇ ಅಥವಾ ಮತ್ತಿನ್ನೇನಾದರೂ ವಿಚಾರಗಳು ಬಂದುವೇ ? ಇದ್ದಕ್ಕಿದ್ದ ಹಾಗೆ ಹೀಗೆ ಹೋಗಿ ಬರಬೇಕಾದರೆ ಭಾರಿ ದೊಡ್ಡ ಕೆಲಸಕ್ಕೇ ಹೋಗಿರಬೇಕು. ಮಾನ್ಯ ಮುಖ್ಯಮಂತ್ರಿಗಳ ಯಾತ್ರೆಯ ಫಲ ಏನೆಂಬುದನ್ನು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪತ್ರಿಕೆಯಲ್ಲಿ ಏಕೆ ಹೋಗಿದ್ದರು ಅಂತ ಅನ್ನುವುದು ಬಂದಿದೆ. ಆದ್ದರಿಂದ ಮತ್ತೆ ಪುನಃ ಅದನ್ನು ಕೇಳಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. 24 ಗಂಟೆಯಲ್ಲಿ ಇಷ್ಟು ಬೇಗ ಹೋಗಿ ಬಂದರಲ್ಲಾ, ತರಾತುರಿಯಲ್ಲಿ, ಇದರಲ್ಲಿ ಏನೋ ಒಂದು ಮಹತ್ವ ಇದೆ.

ಅಧ್ಯಕ್ಷರು.—ಏನೂ ಇಲ್ಲ, ಪತ್ರಿಕೆಯಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಸದಸ್ಯರಾದ ಮೇಲೆ ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಗುರುತರವಾದ ಜವಾಬ್ದಾರಿಯುತರಾಗಿ ಹೋಗಿ ಏನೋ ಒಂದು ಮಹತ್ತರವಾದ ಕಾರ್ಯ ನಡೆಸಿಕೊಂಡು ಬಂದಿರುವುದರಿಂದ ಅದನ್ನು ಈ ಸಭೆಯಲ್ಲಿ ಹೇಳಲಿ ಎಂಬ ಅಪೇಕ್ಷೆಯಿಂದ ಕೇಳುತ್ತಾ ಇದ್ದೇನೆ. ಅವರು ತಾವು ಪಡೆದಂತಹ ಯಾತ್ರೆಯ ಫಲ ಏನೆಂಬುದನ್ನು ಹೇಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಅವರು ಅದನ್ನು ಹೇಳಲಿಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಅವರು ಕೇಳುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ದೆಹಲಿಗೆ ಹೋದದ್ದು ಭೂಸುಧಾರಣೆಯ ವಿಚಾರಕ್ಕೆ ಒಂದು ಸಮಿತಿ ನೇಮಕವಾಗಿದೆ, ಅದರಲ್ಲಿ ನಾನು ಇದ್ದೆ. ಆ ಸಮಿತಿಯ ವರದಿಯನ್ನು ಪೂರ್ಣಮಾಡಿ ಅದನ್ನು ಸರ್ಕಾರಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕಾದ್ದು ಇತ್ತು. ಆ ಸಂದರ್ಭದಲ್ಲಿ ಜರೂರಾಗಿ ನನ್ನನ್ನು ಬರಹೇಳಿದ್ದರು ಅದಕ್ಕಾಗಿ ಹೋಗಿ ಬಂದಿದ್ದೇನೆ.

Strike at the manufacturers of Tiwac watches at Dharwar-Hubli.

ಶ್ರೀ ಸಿ. ಬೈರೇಗೌಡ (ವೇಮಗಲ್).—ಧಾರವಾಡ ಮತ್ತು ಹುಬ್ಬಳ್ಳಿ ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ಸೂಚಿಸಿದ್ದಾರೆ, ಅದಕ್ಕೆ ಕಾರಣ ಅಲ್ಲಿರತಕ್ಕ ಜೈವಾಕ್ಸ್ ಗಡಿಯಾರಗಳನ್ನು ತಯಾರು ಮಾಡತಕ್ಕ ಕಾರ್ಖಾನೆಯವರಿಗೆ ಲೇಬರ್ ಡಿಪಾರ್ಟ್‌ಮೆಂಟಿನವರು ಲಾಕಪ್ಔಟ್‌ನ್ನು ತೆಗೆಯಬೇಕೆಂದು ಅದೇಶ ಕೊಟ್ಟರೂ ಕೂಡ ಇಲ್ಲಿಯವರೆಗೂ ಅದನ್ನು ತೆಗೆದಿಲ್ಲ. 200 ಜನ ಕಾರ್ಮಿಕರು ನಿರ್ಗತಿಕರಾಗಿ ಬೀದಿಯಲ್ಲಿ ತಿರುಗುತ್ತಾ ಇದ್ದಾರೆ.

ಅಧ್ಯಕ್ಷರು.—ಈ ರೀತಿ ನಿಂತುಕೊಂಡು ಹೇಳುವುದು ಸರಿಯಲ್ಲ, ಅದಕ್ಕೆ ಸರಿಯಾದ ನೋಟೀಸ್ ಕೊಡಿ, ಈಗ ಕುಳಿತುಕೊಳ್ಳಿ.

Revised Budget estimates for 1972–73—General Discussion

(Debate Contd.)

† **ಶ್ರೀ ಬಿ. ಬಾಸ್ಕರ ಶೆಟ್ಟಿ (ಕಾಪ್).**—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಎಚ್ಚರದಿಂದ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದು ಪಾತ್ರವಲ್ಲದೆ ಸಮಾಜವಾದಿ ಧೋರಣೆಗೆ ಅನುಗುಣವಾಗಿ ಆರ್ಥಿಕ ಬುನಾದಿಯನ್ನು ಭದ್ರಪಡಿಸುವ ಮತ್ತು ಭವಿಷ್ಯದ ಬಗ್ಗೆ ಭರವಸೆಯನ್ನು ಹುಟ್ಟಿಸುವ ಒಂದು ಒಳ್ಳೆಯ ರೀತಿಯ 1972–73 ನೆಯ ಸಾಲಿನ